# ಮೀನು, ಸೀಗಡಿ ಚಪ್ಪರಿಸುವ ಇಸಬೆಲ್ಲಾ

ವಿದೇಶದಿಂದ ಬಂದವರಲ್ಲಿ ಇಲ್ಲಿನ ಎನ್‌ಜಿಓದಲ್ಲಿ ಕೆಲಸ ಮಾಡುವವರು ಬಹಳ ಕಡಿಮೆ. ಸ್ಪೇನ್‌ನಿಂದ ಬಂದ ಇಸಬೆಲ್ಲಾ ಎಸ್ಕೊಬಿಡೊ ಈ ನಿಟ್ಟಿನಲ್ಲಿ ಬಹಳ ಅಪರೂಪದ ವಿದೇಶಿ ಮಹಿಳೆ ಎನ್ನಬಹುದು.

ಇಸಬೆಲ್ಲಾ ಕೆಲ ವರ್ಷಗಳ ಹಿಂದೆಯೇ ಭಾರತಕ್ಕೆ ಬಂದವರು. ಸದ್ಯ ಬೆಂಗಳೂರಿನಲ್ಲಿ ಎನ್‌ಜಿಓ ಒಂದರಲ್ಲಿ ಕೆಲಸ ಮಾಡುವ ಇಸಬೆಲ್ಲಾ ಸ್ಪೇನ್‌ನಲ್ಲಿ ಹುಟ್ಟಿದರೂ ಬೆಳೆದದ್ದು, ಓದಿದ್ದು ಎಲ್ಲ ಜರ್ಮನಿಯಲ್ಲಿ. ಹೀಗಾಗಿ ಈಕೆ ಮ್ಯಾಡ್ರಿಡ್‌ನ ಜರ್ಮನ್-ಸ್ಪಾನಿಷ್ ದ್ವಿಭಾಷಾ ಶಾಲೆಯಲ್ಲಿ ಓದ ಬೇಕಾಯಿತು. ಜರ್ಮನಿಯಲ್ಲೇ ಪದವಿಯನ್ನೂ ಮುಗಿಸಿದ ಇಸಬೆಲ್ಲಾ ಅಲ್ಲೇ ಎನ್‌ಜಿಓ ಒಂದರಲ್ಲಿ ಕೆಲಸ ಮಾಡುತ್ತಿದ್ದರು. ಇದೇ ಅನುಭವದ ಹಿನ್ನೆಲೆಯಲ್ಲಿ ಇಸಬೆಲ್ಲಾ ಮೊದಲು ಉಡುಪಿ ಜಿಲ್ಲೆಯ ಕುಂದಾಪುರಕ್ಕೆ ಬಂದರು. ಕುಂದಾಪುರದಿಂದ ಕಳೆದ ವರ್ಷವಷ್ಟೇ ಬೆಂಗಳೂರಿಗೆ ಬಂದ ಇವರು ಸದ್ಯ ಬೆಂಗಳೂರು ನಗರ ನಿವಾಸಿ. ಪಟ್ಟಣ, ಹಳ್ಳಿ ಎರಡರಲ್ಲೂ ವಾಸವಿದ್ದ ಕಾರಣ ಇವರಿಗೆ ನಗರ ಮತ್ತು ಹಳ್ಳಿಯ ಎರಡೂ ಕಡೆಯ ಜನಜೀವನ, ಬದುಕಿನ ಚಿತ್ರಣದ ಬಗ್ಗೆ ಚೆನ್ನಾಗಿ ಅರಿವಿದೆ.

'ಭಾರತ ಒಂದು ಉತ್ತಮ ದೇಶ. ಇಲ್ಲಿನ ಎಲ್ಲ ಪ್ರವಾಸಿ ತಾಣಗಳು ಬಹಳ ಸುಂದರವಾಗಿವೆ. ಸಾಂಸ್ಕೃತಿಕವಾಗಿಯೂ ಚೆನ್ನಾಗಿದೆ. ಜನರ ಸ್ನೇಹಪರರು. ದೇಶದ ಅನೇಕ ಹಳ್ಳಿಗಳಿಗೂ ಭೇಟಿ ನೀಡಿದ ನನಗೆ ಎಲ್ಲ ಕಡೆಗಳಲ್ಲೂ ಜನ ಪ್ರೀತಿಯಿಂದ ಮಾತನಾಡಿಸಿದ್ದಾರೆ. ಆತ್ಮೀಯವಾಗಿ ನೋಡಿಕೊಂಡಿದ್ದಾರೆ' ಎನ್ನುವ ಇಸಬೆಲ್ಲಾ, 'ಹಾಗೆ ನೋಡಿದರೆ ನಗರದ ಬದುಕಿಗಿಂತ ಹಳ್ಳಿಗಳಲ್ಲಿ ವಾಸವೇ ವಾಸಿ ಎಂಬ ಅಭಿಪ್ರಾಯ ನನ್ನದು' ಎನ್ನುತ್ತಾರೆ.

'ಬೆಂಗಳೂರಿನಲ್ಲಿ ಜೀವನ ಚೆನ್ನಾಗಿ ನಡೆಯುತ್ತಿದೆ. ಇಲ್ಲಿನ ಹೋಟೆಲ್‌ಗಳಲ್ಲಿ ಬಹಳ ರುಚಿಕರ ಊಟ-ತಿಂಡಿ ಸಿಗುತ್ತದೆ. ರಾತ್ರಿ ಎಷ್ಟು ಹೊತ್ತಾದರೂ ಹೋಟೆಲ್, ಕ್ಲಬ್‌ಗಳಿಗೆ ಹೋದರೂ ಯಾವುದೇ ಭಯವಿಲ್ಲ. ನಾನು ಒಬ್ಬಳೇ ಕ್ಲಬ್, ಹೋಟೆಲ್, ಪಾರ್ಕ್, ಶಾಪಿಂಗ್, ಮಾಲ್‌ಗಳಿಗೆ ಹೋಗುತ್ತೇನೆ. ಇಲ್ಲಿನ ಜನ ಮುಕ್ತ ಮನಸ್ಸಿನವರು ಎಂಬುದನ್ನು ನಾನು ಗುರುತಿಸಿದ್ದೇನೆ' ಎನ್ನುತ್ತಾರೆ ಇಸಬೆಲ್ಲಾ.

ಇತ್ತೀಚೆಗಷ್ಟೆ ಇಸಬೆಲ್ಲಾ ನಗರದಲ್ಲಿ 'ಕ್ಲೋಥರಿ' ಎಂಬ ಬಟ್ಟೆ ಮಳಿಗೆ ತೆರೆದಿದ್ದಾರೆ. ಇದು ಉಡುಪು ಮಾರಾಟ ಮಳಿಗೆಯಲ್ಲ. ಇಲ್ಲಿಂದ ತಮಗೆ ಬೇಕಾದ ಉಡುಪು, ಕಾಸ್ಟ್ಯೂಮ್ಸ್‌ಗಳನ್ನು ಬಾಡಿಗೆಗೆ ಪಡೆಯಬಹುದು. ಮದುವೆ ಮುಂತಾದ ಶುಭ ಸಮಾರಂಭಗಳಿಗಾಗಿ ರೇಷ್ಮೆ ಸೀರೆ, ಪಾರ್ಟಿವೇರ್ ಉಡುಗೆಗಳ ಸಂಗ್ರಹ ಇಲ್ಲಿದೆ. ಇಲ್ಲಿಂದ ತಮಗೆ ಬೇಕಾದ ಅಳತೆಯ ಉಡುಗೆಯನ್ನು ಪಡೆದು ಬಳಸಿದ ನಂತರ ಹಿಂತಿರುಗಿಸಬಹುದು. ಇದಕ್ಕೆ ಬಾಡಿಗೆ ಪಡೆಯಲಾಗುತ್ತದೆ. ಇಂತಹ ಬಟ್ಟೆ ಮಳಿಗೆಗಳು ಬೆಂಗಳೂರಿನಲ್ಲಿ ಕಾಣಸಿಗುವುದು ಬಹಳ ಅಪರೂಪ.

ಕರಾವಳಿ ಪ್ರದೇಶದಲ್ಲಿ ಕೆಲಕಾಲ ಇದ್ದು ಬಂದ ಕಾರಣ ಇಸಬೆಲ್ಲಾ ಸೀಫುಡ್‌ನ ರುಚಿ ಕಂಡಿದ್ದಾರೆ. ಮೀನು, ಸೀಗಡಿ ಅಡುಗೆ ಇವರಿಗೆ ಬಹಳ ಇಷ್ಟವಂತೆ. ಜಿಂಕೆ ಮತ್ತು ಮೊಲದ ಮಾಂಸದ ಅಡುಗೆಯನ್ನೂ ಟೇಸ್ಟ್ ಮಾಡಿದ್ದಾರೆ. ಇವೆಲ್ಲವನ್ನೂ ಬಹಳ ಇಷ್ಟಪಡುವುದಾಗಿ ಹೇಳುವ ಇಸಬೆಲ್ಲಾ, ಸಸ್ಯಾಹಾರದಲ್ಲಿ ಟೊಮ್ಯಾಟೊ ಕರಿ ಮತ್ತು ಪರಾಟ, ಪೊಟ್ಯಾಟೊ ಆಮ್ಲೆಟ್ ಅನ್ನು ಇಷ್ಟಪಟ್ಟು ತಿನ್ನುತ್ತಾರಂತೆ.

ಇಸಬೆಲ್ಲಾ ತಂದೆ ತಾಯಿ ಜರ್ಮನಿಯಲ್ಲೇ ಇದ್ದಾರೆ. ತಾಯಿ ಜರ್ಮನ್ ಟೆಲಿಕಮ್ಯುನಿಕೇಶನ್ ಕಂಪೆನಿಯಲ್ಲಿ ಉದ್ಯೋಗಿ. ತಂದೆ ಕಂಪೆನಿಯೊಂದರಲ್ಲಿ ಸೇಲ್ಸ್ ಮ್ಯಾನೇಜರ್. ಇವರ ತಂಗಿ ಕೂಡ ತಂದೆ ತಾಯಿ ಜತೆ ಜರ್ಮನಿಯಲ್ಲೇ ವಾಸವಾಗಿದ್ದಾರೆ. ಇಲ್ಲಿ ಸ್ವಲ್ಪ ವರ್ಷ ಕೆಲಸ ಮಾಡಿ ಮತ್ತೆ ಜರ್ಮನಿಗೆ ವಾಪಸಾಗುವ ಇರಾದೆ ಇಸಬೆಲ್ಲಾ ಅವರಿಗಿದೆ.



ಸ್ಪೇನ್‌ನಿಂದ ಬಂದ ಇಸಬೆಲ್ಲಾ ಎಸ್ಕೊಬಿಡೊ

ಎಲ್ಲ ವಿದೇಶೀಯರು ಸಾಮಾನ್ಯವಾಗಿ ಅನುಭವಿಸುವ ಟ್ರಾಫಿಕ್ ಕಿರಿಕಿರಿ ಇಸಬೆಲ್ಲಾರನ್ನೂ ಕಂಗೆಡಿಸಿದೆ. ರಸ್ತೆಗಳಲ್ಲಿ ಯಾವ ಸಮಯ ನೋಡಿದರೂ ಅತಿಯಾಗಿರುವ ವಾಹನದಟ್ಟಣೆಯಿಂದ ಇವರೂ ಬೇಸತ್ತಿದ್ದಾರೆ. ನಿತ್ಯವೂ ಕಾಣುವ ಕೇಳುವ ರಸ್ತೆ ಅಪಘಾತ ಸುದ್ದಿಯೂ ಇವರಿಗೆ ಆತಂಕ ತಂದಿದೆಯಂತೆ. ಉಳಿದಂತೆ ಇಲ್ಲಿನ ಹವಾಮಾನ, ಆಹಾರ ಪದ್ಧತಿ, ಜೀವನಶೈಲಿಗೆ ಇಸಬೆಲ್ಲಾ ಚೆನ್ನಾಗಿ ಹೊಂದಿಕೊಂಡಿದ್ದಾರೆ.

★ ಅವನೀಶ್